ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬೃ.ಬೆಂ.ಮ.ಪಾ/ಕಾ.ಪಾ.ಅ(ವಿ)/ಯ.ವ/ಆ.ಅ/ 02 /20-21

ಕಾರ್ಯಪಾಲಕ ಅಭಿಯಂತರು(ವಿದ್ಯುತ್) ರವರ ಕಛೇರಿ
ಬೃ.ಬೆಂ.ಮ.ಪಾ, ಯಲಹಂಕ ವಲಯ
ಬಳ್ಳಾರಿ ರಸ್ತೆ, ಬೆಂಗಳೂರು-92.
ದಿನಾಂಕ: 24.08.2020

ಆಡಳಿತಾತ್ಮಕ ಅನುಮೋದನೆ

ವಿಷಯ:- Providing Control switches,Wires, LED Street Lights & etc to Kattigenahalli and surrounding areas in Jakkur Ward No 05

ಉಲ್ಲೇಖ:-ಮುಖ್ಯ ಆರ್ಥಿಕ ಅಧಿಕಾರಿರವರ ಕಛೇರಿ ಕಾಮಗಾರಿ ಸಂಕೇತ:- 005-21-000027.
ಅಂದಾಜು ಮೊತ್ತ : **ರೂ.೫೦.೦೦ ಲಕ್ಷಗಳು**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಯಲಹಂಕ ವಲಯರವರು ಈ ಕೆಳಗಿನ ಕಾಮಗಾರಿಗೆ 2020-21 ನೇ ಸಾಲಿನ ಅಯವ್ಯಯದ ಲೆಕ್ಕ ಶಿರ್ಷಿಕೆ-**P3801** ಅನುದಾನದಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಯಲಹಂಕ ವಲಯ ವಿದ್ಯುತ್ ವಿಭಾಗಕ್ಕೆ 2020-21 ನೇ ಸಾಲಿನ ಪಿ.ಓ.ಡಬ್ಲ್ಯೂ ಅನುದಾನದಡಿಯಲ್ಲಿ ಕೆ.ಪಿ.ಡಬ್ಲ್ಯೂಡಿ. 2019-20 ವಿದ್ಯುತ್ (ಎಸ್.ಆರ್) ದರಗಳ ಹಾಗೂ ಅನುಮೋದಿತ ದರಗಳ ಅನ್ವಯ ಅಂದಾಜು ಪಟ್ಟಿಯನ್ನು ತಯಾರಿಸಿ ಮಂಜೂರಾತಿಗಾಗಿ ಮಂಡಿಸಿರುತ್ತಾರೆ ಮತ್ತು ಜಾಬ್ ಕೋಡ್ 005-21-000027 ನ್ನು ಪಡೆಯಲಾಗಿದೆ.

ಸದರಿ ಕಾಮಗಾರಿ ಕೆಲಸಕ್ಕೆ ಮಾನ್ಯ ಆಯುಕ್ತರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಸಂಖ್ಯೆ: ಬಿ12(1)/ಪಿ.ಆರ್/394/18-19, ದಿನಾಂಕ:25-09-2019 ರಂತೆ ನೀಡಿರುವ ಅಧಿಕಾರದನ್ವಯ ಯಲಹಂಕ ವಲಯ ಜಂಟಿ ಆಯುಕ್ತರು ಬಿಬಿಎಂಪಿ/ಯ.ವ/ಜಂ.ಆ/901/20-21, ದಿನಾಂಕ:24/08/2020 ರಂದು ಈ ಮೇಲಿನ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುವ ಮೇರೆಗೆ ಮಾನ್ಯ ಆಯುಕ್ತರ ಅಧಿಕಾರ ಪ್ರತ್ಯಾಯೋಜನೆ ಅನ್ವಯ ಆಡಳಿತಾತ್ಮಕ ಪ್ರತಿಗೆ ಸಹಿಯನ್ನು ಮಾಡಿದೆ.

ಆಡಳಿತಾತ್ಮಕ ಮಂಜೂರಾತಿ ಪುಸ್ತಕದ ಪುಟ ಸಂಖ್ಯೆ- 102&103 ಕ್ರಮಸಂಖ್ಯೆ: 02 ರಲ್ಲಿ ನಮೂದಿಸಲಾಗಿದೆ.

ಈ ಮೇಲ್ಕಂಡ ಅಂದಾಜುಪಟ್ಟಿಗೆ ಕೆಳಗೆ ನಮೂದಿಸಿರುವ ಷರತ್ತುಗಳನ್ನು ಪಾಲಿಸುವ ನಿಬಂಧನೆಯೊಂದಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ.

ಷರತ್ತುಗಳು:

1. ಅಂದಾಜು ಪಟ್ಟಿಯ ಮೊತ್ತ ರೂ.1.00 ಲಕ್ಷಗಳಿಗೆ ಮೀರಿದ ಕಾಮಗಾರಿಗಳಿಗೆ ಟೆಂಡರ್ ಕರೆಯುವುದು
2. ದರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೆಟಾ ದರವನ್ನು ತಯಾರಿಸಿ ಅನುಮೋದನೆ ಪಡೆಯುವುದು.
3. ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೊಟೇಷನ್ ಕರೆದು ಅನುಮೋದನೆ ಪಡೆಯುವುದು.
4. ಲಾಗ್ ಪುಸ್ತಕದಲ್ಲಿ ಗುತ್ತಿಗೆದಾರರು ನಿರ್ವಹಿಸಿದ ಕಾರ್ಯ ಚಟುವಟಿಕೆಗಳ ಬಗ್ಗೆ ದಾಖಲೆ ರೂಪದಲ್ಲಿ ನಮೂದಿಸಿಕೊಳ್ಳುವುದು.
5. ಮೇಲಿನ ಕೆಲಸದ ವೆಚ್ಚವನ್ನು ಉಪ ಅನುದಾನದಡಿಯಲ್ಲಿ ಭರಿಸುವುದು.

ಕಾರ್ಯಪಾಲಕ ಅಭಿಯಂತರರು (ವಿ)
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಮುಖ್ಯ ಅಭಿಯಂತರರು (ವಿ) ಯಲಹಂಕ ರವರ ಮಾಹಿತಿಗಾಗಿ.